ಅನುಬಂಧ – II

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (414)141
ಸದಸ್ಯರ ಹೆಸರು : ಶ್ರೀ ನರೇಂದ್ರಬಾಬು ಎನ್.ಎಲ್
ಉತ್ತರಿಸುವ ಸಚಿವರು : (ಶ್ರೀ ಬಿ.ಯಡಿಯೂರಪ್ಪ)
ಮುಖ್ಯಮಂತ್ರಿಯವರು

ಅ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಳೆದ ಮೂರು ವರ್ಷಗಳಿಂದ ಪ್ರತಿ ವರ್ಷವು ಆಯವ್ಯಯದಲ್ಲಿ ಯೋಜನೆಗೆ ಎಷ್ಟು ಹಣವನ್ನು ಮೀಸಲಿರಿಸಲಾಗಿದೆ;

2005–06 – ರೂ.102407.8 ಲಕ್ಷ

2006–07 – ರೂ.123785.25 ಲಕ್ಷ

2007–08 – ರೂ.213404.95 ಲಕ್ಷ

ಆ ಇದರಲ್ಲಿ ಪ್ರತಿ ವರ್ಷವು ಶೇಖಡ 18ರ ಹಣವು ಎಷ್ಟು ಮೊತ್ತವಾಗಿರುತ್ತದೆ; ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಶೇಖಡ 18ರ ಹಣದಲ್ಲಿ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ;

2005–06 – ರೂ.3792.29 ಲಕ್ಷ

2006–07 – ರೂ.6059.98 ಲಕ್ಷ

2007–08 – ರೂ.4998.00 ಲಕ್ಷ

ಅದರಲ್ಲಿ ಬಡವರಿಗೆ/ಹರಿಜನ/ಗಿರಿಜನರಿಗೆ ಎ.ಸಿ. ಶೀಟ್ ಒದಗಿಸುವುದು, ನೀರು, ಸೂರು, ಭಾಗ್ಯಜ್ಯೋತಿ/ಶೌಚಾಲಯ, ರಸ್ತೆ, ಚರಂಡಿ, ಕಟ್ಟಡ ನಿರ್ವಹಣೆ/ನಿರ್ಮಾಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಇ ಸರ್ಕಾರ ಆದೇಶದ ಪ್ರಕಾರ ಶೇಖಡ 18ರಲ್ಲಿ ಶಿಕ್ಷಣಕ್ಕೆ ಆರ್ಥಿಕ ಅಭಿವೃದ್ಧಿಗೆ ಹಾಗೂ ಇನ್ನಿತರ ಕಾರ್ಯಕ್ರಮಗಳಿಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ (ವರ್ಷವಾರು ಹಾಗೂ ವಾರ್ಡುವಾರು ವಿವರಗಳನ್ನು ಒದಗಿಸುವುದು);

ಈ ಕಾರ್ಯಕ್ರಮಗಳಿಗೆ ಮಾಡಿರುವ ವರ್ಷವಾರು ಅನುದಾನ ಕೆಳಕಂಡಂತಿದೆ;

2005–06 – ರೂ.764.56 ಲಕ್ಷ

2006–07 – ರೂ.721.51 ಲಕ್ಷ

2007–08 – ರೂ.816.60 ಲಕ್ಷ

ಈ ವಾರ್ಡುವಾರು ಫಲಾನುಭವಿಗಳನ್ನು ಯಾವ ರೀತಿ ಆಯ್ಕೆ ಮಾಡಲಾಗಿದೆ (ಪ್ರತಿ ಫಲಾನುಭವಿಗಳ ಹೆಸರು ವಿಳಾಸದೊಂದಿಗೆ ವಿವರಗಳನ್ನು ನೀಡುವುದು?

ಆಯಾ ವಲಯಗಳಲ್ಲಿ ಫಲಾನುಭವಿಗಳ ಆಯ್ಕೆ ಮಾಡಲು ಅಪರ/ಜಂಟಿ ಆಯುಕ್ತರುಗಳ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿಯನ್ನು ರಚಿಸಲಾಗಿರುತ್ತದೆ. ಈ ಸಮಿತಿಯಲ್ಲಿ ಉಪ ಆಯುಕ್ತರು–ಸದಸ್ಯರು, ಕಲ್ಯಾಣಾಧಿಕಾರಿ–ಸದಸ್ಯ ಕಾರ್ಯದರ್ಶಿ ಹಾಗೂ ಸರ್ಕಾರದ ಸಂಬಂಧಪಟ್ಟ ಇಲಾಖೆಗಳಿಂದ ಅಧಿಕಾರಿಗಳು–ಸದಸ್ಯರು ಒಳಗೊಂಡಿರುತ್ತಾರೆ. ಪತ್ರಿಕಾ ಪ್ರಕಟಣೆಯಲ್ಲಿ ಕಾರ್ಯಕ್ರಮವಾರು ಸ್ವೀಕರಿಸಿದ ಅರ್ಜಿಗಳ ಪರಿಶೀಲನೆ ನಂತರ ಆಯ್ಕೆ ಸಮಿತಿಯ ಅರ್ಹ ಫಲಾನುಭವಿಗಳನ್ನು ಮಾರ್ಗಸೂಚಿಗಳನ್ವಯ ಆಯ್ಕೆ ಮಾಡಿ ಕಾರ್ಯಕ್ರಮ ಅನುಷ್ಠಾನ ಮಾಡಲಾಗಿದೆ. 2005–06ನೇ ಸಾಲಿನಿಂದ 2007–08ನೇ ಸಾಲಿನವರೆಗೆ ಶೇ.18ರ ಅನುದಾನದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಫಲಾನುಭವಿಗಳ ಸಂಖ್ಯೆಯ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

ಕಲ್ಯಾಣ ವಿಭಾಗ, ಕೇಂದ್ರ ಕಛೇರಿಯಲ್ಲಿನ ವಿವಿಧ ಕಾರ್ಯಕ್ರಮಗಳ ವರ್ಷವಾರು ಫಲಾನುಭವಿಗಳ ವಿವರಗಳು

ಕ್ರಮ ಸಂಖ್ಯೆ	ಕಾರ್ಯಕ್ರಮಗಳ ವಿವರ	ಆರ್ಥಿಕ ವರ್ಷ		
		2005–06	2006–07	2007–08
1	ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಹಾಯಧನ	226	251	227
2	ಗಣಕಯಂತ್ರ ಹಾರ್ಡ್‌ವೇರ್ ತರಬೇತಿ	371	247	–
3	ಗಣಕಯಂತ್ರ ಸಾಫ್ಟ್‌ವೇರ್ ತರಬೇತಿ	1467	3224	4103
4	ವಸತಿ ಸಮುಚ್ಚಯ ಜಂಟಿ ಮನೆ ಮತ್ತು ಅಭಿವೃದ್ಧಿ	–	828	–
5	ವಾಹನ ಚಾಲನ ತರಬೇತಿ	7049	2145	136
6	ನಿರುದ್ಯೋಗಗಳಿಗೆ ಪಾಲಿಕೆ ಆರ್ಥಿಕ ಸ್ವಾವಲಂಬನೆ ಯೋಜನೆ	204	360	358
7	ಪ್ರತಿಭಾವಂತರಿಗೆ ಪ್ರೋಪೆಷನಲ್ ಕೋರ್ಸ್‌ಗಳಲ್ಲಿ ಪ್ರವೇಶಕ್ಕೆ ಹಾಗೂ ಉನ್ನತ ವ್ಯಾಸಾಂಗಕ್ಕಾಗಿ ಧನ ಸಹಾಯ	1	4	–

8	ಹೊಲಿಗೆ ಯಂತ್ರಗಳನ್ನು ಒದಗಿಸುವುದು	1910	2416	8
9	ಹೊಲಿಗೆ ತರಬೇತಿ (ಸ್ಪೈಫಂಡ್)	4170	1115	–
10	ವಿದ್ಯಾರ್ಥಿಗಳಿಗೆ ವ್ಯಕ್ತಿ ವಿಕಾಸ ಕಾರ್ಯಗಾರ	–	1240	1240
	ಒಟ್ಟು	**15398**	**11830**	**6072**

1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (125)159
2 ಸದಸ್ಯರ ಹೆಸರು : ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್.ಎಸ್.
3 ಉತ್ತರಿಸುವವರು : (ಶ್ರೀ ಸುರೇಶ್ ಕುಮಾರ) ಮಾನ್ಯ ಪೌರಾಡಳಿತ ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು

ಅ) ಗೌರಿಬಿದನೂರು ತಾಲ್ಲೂಕಿನ ಯು.ಐ.ಡಿ.ಎಸ್.ಎಸ್.ಎಂ.ಟಿ ಯೋಜನೆಯಡಿಯಲ್ಲಿ ಪಟ್ಟಣವನ್ನು ಅಭಿವೃದ್ಧಿಪಡಿಸಲು ಯೋಜನೆ ಮಂಜೂರಾಗಿದ್ದು, ಇದುವರೆವಿಗೂ ಈ ಯೋಜನೆ ಅನುಷ್ಠಾನಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಯು.ಐ.ಡಿ.ಎಸ್.ಎಸ್.ಎಂ.ಟಿ ಯೋಜನೆಗೆ ಸಂಬಂಧಿಸಿದಂತೆ ಗೌರಿಬಿದನೂರು ಪುರಸಭೆಯಿಂದ ಯಾವುದೇ ಪ್ರಸ್ತಾವನೆಯು ಸರ್ಕಾರಕ್ಕೆ ಸಲ್ಲಿಸಿರುವುದಿಲ್ಲ. ಆದ್ದರಿಂದ ಸದರಿ ಯೋಜನೆಯು ಈ ಪಟ್ಟಣಕ್ಕೆ ಮಂಜೂರಾಗಿರುವುದಿಲ್ಲ.

ಆ) ಹಾಗಿದ್ದಲ್ಲಿ, ಈ ಯೋಜನೆಯ ವಿಳಂಬಕ್ಕೆ ಕಾರಣವೇನು?

ಅನ್ವಯಿಸುವುದಿಲ್ಲ.

ಇ) ಈ ಯೋಜನೆಯನ್ನು ಜಾರಿಗೆ ತಂದು ಅಭಿವೃದ್ಧಿಪಡಿಸಲು ಸರ್ಕಾರವು ಕೈಗೊಳ್ಳುವ ಕ್ರಮವೇನು?

2006–07ನೇ ಸಾಲಿನಿಂದ 2010–11ನೇ ಸಾಲಿನವರೆಗೆ ಯು.ಐ.ಡಿ.ಎಸ್.ಎಸ್.ಎಂ.ಟಿ ಯೋಜನೆಯಡಿ ಕೇಂದ್ರ ಸರ್ಕಾರವು ವಿವಿಧ ಯೋಜನೆಗಳಿಗೆ ನಿಗದಿಪಡಿಸಿದ್ದ ಅನುದಾನಕ್ಕಿಂತ ಹೆಚ್ಚಾಗಿ ಈಗಾಗಲೇ ಯೋಜನೆಗಳಿಗೆ ಮಂಜೂರಾತಿ ನೀಡಿರುವುದರಿಂದ ಗೌರಿಬಿದನೂರು ಪಟ್ಟಣವನ್ನು ಈ ಯೋಜನೆಯಡಿ ಸೇರಿಸಲು ಅವಕಾಶವಿರುವುದಿಲ್ಲ.